ಒಂದನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.

ಸಿ.ಸಿ. ನಂ. 1714/2025

ಫಿರ್ಯಾದುದಾರರು ಸಾಗರ ಗ್ರಾಮಾಂತರ ಪೊಲೀಸ್.

ವಿರುದ್ಧ

ಆರೋಪಿತರುಃ- 1) ರಾಜೀವ್ ಬಿ.ಪಿ.

| | | |
|---|---|---|
| 1 ನೇ ಆರೋಪಿತನ ಹೆಸರು | - | ರಾಜೀವ್ ಬಿ.ಪಿ. |
| ತಂದೆಯ ಹೆಸರು | - | ಪುಟ್ಟಪ್ಪ. |
| ವಯಸ್ಸುಃ | - | 35 ವರ್ಷ, |
| ವೃತ್ತಿಃ | - | ಕೂಲಿ. |
| ವಾಸಃ- | - | ಬೇಳೂರು ಗ್ರಾಮ,<br>ಸಾಗರ ತಾಲ್ಲೂಕು,<br>ಶಿವಮೊಗ್ಗ ಜಿಲ್ಲೆ. |

## ದೋಷಾರೋಪಣೆ

ಸಾಗರದ ಒಂದನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ದೀಪ ಕೆ.ಆರ್., ಬಿ.ಎ.ಎಲ್. ಎಲ್‌ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕಃ*20.07.2022* ರಂದು ಬೆಳಿಗ್ಗೆ *10.30* ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು, ಬೇಳೂರು ಗ್ರಾಮದ ವಾಸಿಯಾದ ಚಾಸಾ-*01* ರವರ ಮನೆಯ ಅಂಗಳದಲ್ಲಿ ಚಾಸಾ-*02,03,04,05* ರವರ ಸಮಕ್ಷಮದಲ್ಲಿ ಚಾಸಾ-*01* ರವರು ಆರೋಪಿಯಾದ ನಿಮಗೆ ತಾನು ಬಾವಿಗೆ ಹಾರಿ ಸಾಯುತ್ತೇನೆ ಎಂದು ಹೇಳಿದ್ದಕ್ಕೆ ಚಾಸಾ-*01* ರವರು ಈ ವಯಸ್ಸಿನಲ್ಲಿ ಹೀಗೆ ಮಾಡುತ್ತಿದ್ದೀಯಲ್ಲಾ ನಿನಗೆ ಬುದ್ದಿ ಇಲ್ಲವಾ? ಎಂದು ಕೇಳಿದ್ದಕ್ಕೆ ಆರೋಪಿಯಾದ ನೀವು ಚಾಸಾ-*01* ರವರಿಗೆ ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡುತ್ತಾ ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *504* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಷಯವಾಗಿ ಆರೋಪಿತನಾದ ನೀವು ಏಕಾಏಕಿ ಅಲ್ಲೇ ಬಿದ್ದಿದ್ದ ಕಬ್ಬಿಣದ ಕೊಳವೆಯಿಂದ ಚಾಸಾ-*01* ರವರ ತಲೆಯ ಮೇಲ್ಭಾಗದ ಬಲಬದಿಗೆ ಬಲವಾಗಿ ಹೊಡೆದಿದ್ದರಿಂದ ಚಾಸಾ-*01* ರವರಿಗೆ ತಲೆಯ ಮೇಲ್ಭಾಗದ ಬಲಭಾಗದಲ್ಲಿ ಮೂಳೆಗೆ ತೀವ್ರ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ *326* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.

ದಿನಾಂಕಃ 16.04.2026

(ದೀಪ ಕೆ.ಆರ್.)
ಒಂದನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.